**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.1023/2025**

| | | |
|---|---|---|
| ಸಾಕ್ಷಿದಾರರ ಹೆಸರು | : ಡಾ. ವೃಂದ ಪ್ರಭು | ಪ್ರಾಸಾ-8 |
| ಗಂಡನ ಹೆಸರು | : ಡಾ.ಮೋಹನ್ ಪ್ರಭು | ಚಾಸಾ-11 |
| ವಯಸ್ಸು | : 55 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಅಪ್ತಾರ್ ಮೊಜಾಲಿಸ್ಟ್ | ದಿನಾಂಕಃ28.04.2026 |
| ವಾಸಸ್ಥಳ | : ಬೇಲೂರು ಆಸ್ಪತ್ರೆ | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನಾನು 2014 ರಿಂದ 2025 ರವರೆಗೂ ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ.21.01.2025 ರಂದು ಚಾಸಾ-2 ರವರು ಮ.3.40 ರ ಸಮಯದಲ್ಲಿ 30 ರಿಂದ 40 ಅಡಿ ಎತ್ತರದಿಂದ ಬಿದ್ದ ಹಿನ್ನಲೆಯಲ್ಲಿ ಚಿಕಿತ್ಸೆಗೆಂದು ಆಸ್ಪತ್ರೆಗೆ ಚಾಸಾ-10 ರವರು ಕರೆದುಕೊಂಡು ಬಂದಿರುತ್ತಾರೆ. ಅವರನ್ನು ಪರೀಕ್ಷಿಸಲಾಗಿ ಚಾಸಾ-2 ರವರಿಗೆ ಬೆನ್ನಿನ ಭಾಗದಲ್ಲಿ ಊತ ನೋವು ಇರುವುದು ಕಂಡುಬಂದಿರುತ್ತದೆ ಮತ್ತು ಚಾಸಾ-2 ರವರು ತಮ್ಮ ಕಾಲುಗಳು ಬಲವನ್ನು ಕಳೆದುಕೊಂಡಿರುವ ಬಗ್ಗೆ ನನಗೆ ತಿಳಿಸಿರುತ್ತಾರೆ. ಅವರಿಗೆ ಚಿಕಿತ್ಸೆಯನ್ನು ನೀಡಿ ನಂತರ ಹೆಚ್ಚಿನ ಚಿಕಿತ್ಸೆ ಅವಶ್ಯಕತೆ ಇದ್ದ ಕಾರಣ ಅವರನ್ನು ಕಳುಹಿಸಿಕೊಟ್ಟಿರುತ್ತೇವೆ. ನಂತರ ಪೋಲಿಸರು ವರದಿಯನ್ನು ಮನವಿ ಮಾಡಿಕೊಂಡ ಸಮಯದಲ್ಲಿ ಮಂಗಳೂರಿನ ಕೆ.ಎಂ.ಸಿ. ಆಸ್ಪತ್ರೆ ಮತ್ತು ಚಿಕ್ಕಮಗಳೂರಿನ ಆಶ್ರಯ ಆಸ್ಪತ್ರೆಯ ವರದಿಯನ್ನು ಹಾಜರುಪಡಿಸಿದ್ದರು. ಸದರಿ ವರದಿಯ ಪ್ರಕಾರ ಚಾಸಾ-2 ರವರಿಗೆ Spinal cord injury ಆಗಿರುವ ಬಗ್ಗೆ ಮತ್ತು Vertebral bone fracture ಆಗಿರುವ ಬಗ್ಗೆ ಕಂಡು ಬಂದಿರುತ್ತದೆ. ಎಡ ಎದೆ ಭಾಗದಲ್ಲಿ Multiple rib fracture ಮತ್ತು ಶ್ವಾಸಕೋಶದ ಸುತ್ತಾ ರಕ್ತವು ಸೇರಿಕೊಂಡಿರುವ ಬಗ್ಗೆ ತಿಳಿದು ಬಂದಿರುತ್ತದೆ. ಚಾಸಾ-2 ರವರಿಗೆ ಆಗಿರುವಂತಹ ಗಾಯವು ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ.

ಸಾಕ್ಷಿಯು ದಿ.18.04.2025 ರಂದು ನೀಡಿರುವಂತಹ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಸದರಿ ಪ್ರಮಾಣ ಪತ್ರವನ್ನು ನಿಪಿ-8 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ.ಎಸ್. ವಕೀಲರಿಂದಃ**

ಚಾಸಾ-2 ರವರಿಗೆ ನಮ್ಮ ಆಸ್ಪತ್ರೆಯಲ್ಲಿ ಯಾವುದೇ X-ray ನ್ನು ಮಾಡಿರುವುದಿಲ್ಲ. ಮೂಡಿಗೆರೆ ಆಸ್ಪತ್ರೆಯಲ್ಲಿ X-ray ಮಾಡಿಸುವ ಸೌಲಭ್ಯ ಇದೆ ಎಂದರೆ ಸರಿ. ಅದೇ ರೀತಿಯಾಗಿ ಮೂಡಿಗೆರೆ ಆಸ್ಪತ್ರೆಯಲ್ಲಿ Orthopedician ಇರುತ್ತಾರೆ ಎಂದರೆ ಸರಿ. ಚಾಸಾ-2 ರವರನ್ನು ವಾರದ ದಿನವಾದ ಮಂಗಳವಾರ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ವಾರದ ದಿನಗಳಲ್ಲಿ ಮ.2.30 ರ ಸಮಯದಲ್ಲಿ ಎಲ್ಲಾ ವೈಧ್ಯಾಧಿಕಾರಿಗಳು ಕರ್ತವ್ಯದಲ್ಲಿ ನಿರತರಾಗಿರುತ್ತಾರೆ ಎಂದರೆ ಸರಿ. ನಿಪಿ-2 ರ ಪ್ರಕಾರ ನಾನು ಆ ದಿನ ಚಾಸಾ-2

ರವರನ್ನು ಮೂಡಿಗೆರೆಯ  Orthopedician ರವರ ಬಳಿ ಕಳುಹಿಸಿರುವುದಿಲ್ಲ ಎಂದರೆ ಸರಿ. ಆ ರೀತಿಯಾಗಿ ಚಾಸಾ-2 ರವರನ್ನು ಕಳುಹಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಒಂದು ವೇಳೆ ಆ ದಿನ ಚಾಸಾ-2 ರವರನ್ನು ಮೂಡಿಗೆರೆಯ Orthopedician ನ ಬಳಿ ಕಳುಹಿಸಿದ್ದಲ್ಲಿ ಅವರಿಗೆ ಎಷ್ಟು ಪ್ರಮಾಣದ ಗಾಯ ಆಗಿರಬಹುದು ಎಂದು ತಿಳಿದು ಬರುತ್ತಿತ್ತು ಎಂದರೆ ನನಗೆ ಅಷ್ಟು ತಿಳಿಯುವುದಿಲ್ಲ ಎಂದು ನುಡಿಯುತ್ತಾರೆ. ನಾನು ಆ ರೀತಿಯಾಗಿ ಕಳುಹಿಸದೇ ಇರುವುದು ತಪ್ಪು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಚಾಸಾ-2 ರವರ ಸ್ಥಿತಿಯನ್ನು ನೋಡಿ ಹೆಚ್ಚಿನ ಚಿಕಿತ್ಸೆಗೆ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ.

ನಿಪಿ-8 ರಲ್ಲಿ ಚಾಸಾ-2 ರವರ ಸ್ಥಿತಿಯ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿ. ಚಾಸಾ-2 ರವರು 30 ರಿಂದ 35 ಅಡಿ ಎತ್ತರದಿಂದ ಬಿದ್ದಿರುವ ಬಗ್ಗೆ ತಿಳಿಸಿರುತ್ತಾರೆ ಎಂದರೆ ಸರಿ. ಚಾಸಾ-2 ರವರೊಟ್ಟಿಗೆ ಚಾಸಾ-10 ರವರು ಬಂದಿರುತ್ತಾರೆ. ನಿಪಿ-8 ನ್ನು ನೀಡುವ ಪೂರ್ವದಲ್ಲಿ ನನ್ನ ಮುಂದೆ ಹಾಜರುಪಡಿಸಿದ್ದಂತಹ ವರದಿಯನ್ನು ನಾನು ಈ ದಿನ ನ್ಯಾಯಾಲಯದ ಮುಂದೆ ನೋಡಿರುವುದಿಲ್ಲ. ನಿಪಿ-8 ರಲ್ಲಿ ನನ್ನ ಮೇಲಿನ ವೈಧ್ಯಾಧಿಕಾರಿಗಳು ನೀಡಿದ ವರದಿಯಲ್ಲಿ ನಮೂದಿಸಿರುವಂತಹ ಗಾಯದ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-8 ರಲ್ಲಿ ನಮೂದಿಸಿರುವಂತಹ ಗಾಯಗಳನ್ನು ಯಾವ ಆಸ್ಪತ್ರೆಯ ವರದಿಯ ಮೇರೆಗೆ ನಮೂದಿಸಿರುತ್ತೇನೆ ಎಂದು ನನಗೆ ಈಗ ನೆನಪಾಗುತ್ತಿಲ್ಲ. ಒಂದು ವೇಳೆ ನಿಪಿ-8 ನ್ನು ನೀಡುವ ಪೂರ್ವದಲ್ಲಿ ಇತರೆ ಯಾವುದೇ ವರದಿಯನ್ನು ಪರಿಶೀಲಿಸಿದ್ದಲ್ಲಿ ಅದನ್ನು ನಿಪಿ-8 ರಲ್ಲಿ ನಮೂದಿಸುತ್ತಿದ್ದೆ ಎಂದರೆ ಸಾಕ್ಷಿಯು ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-8 ನ್ನು ಸ್ವೀಕರಿಸಿಕೊಳ್ಳುವ ಪೂರ್ವದಲ್ಲಿ ಪೋಲಿಸರು ಇತರೆ ಆಸ್ಪತ್ರೆಯ ವರದಿಗಳನ್ನು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಈ ದಿನ ಆ ರೀತಿಯಾದ ವರದಿಗಳನ್ನು ಸರ್ಕಾರಿ ಅಭಿಯೋಜಕರು ನನಗೆ ತೋರಿಸಿರುವುದಿಲ್ಲ ಎಂದರೆ ಸರಿ. ನಿಪಿ-8 ರಲ್ಲಿ ನಮೂದಿಸಿರುವಂತಹ ಗಾಯಗಳು ಚಾಸಾ-2 ರವರಿಗೆ ಸಂಭವಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-8 ನ್ನು ನೀಡುವ ಪೂರ್ವದಲ್ಲಿ ನಾನು ಚಾಸಾ-2 ರವರನ್ನು ಪರೀಕ್ಷಿಸಿರುವುದಿಲ್ಲ ಎಂದರೆ ಸರಿ. ಚಾಸಾ-2 ರವರಿಗೆ ಯಾವ ಸ್ಥಳದಲ್ಲಿ ಮತ್ತು ಯಾರ ತೋಟದಲ್ಲಿ ಗಾಯಗಳಾಗಿರುತ್ತವೆ ಎಂಬುದರ ಬಗ್ಗೆ ನಿಪಿ-8 ರಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ಚಾಸಾ-2 ರವರಿಗೆ ಯಾವುದೇ ಗಾಯಗಳು ಸಂಭವಿಸದೇ ಇದ್ದರೂ ಪೋಲಿಸರು ಕೋರಿಕೆಯ ಮೇರೆಗೆ ಸುಳ್ಳು ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-8 ರಲ್ಲಿ ನಮೂದಿಸಿರುವಂತಹ ಗಾಯಗಳು ಸ್ವತಃ ಚಾಸಾ-2 ರವರೇ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.